ಅ) ಸದ್ಯಕ್ಕೆ ಇಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದ ಲಾಟರಿಯ ಆದಾಯ

1118-ಶ್ರೀ ವಿಜಯ ಕುಮಾರ್ ಶೆಟ್ಟಿ, (ಸೂರತ್ಕಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಸರ್ಕಾರ ನಡೆಸುತ್ತಿರುವ ರಾಜ್ಯ ಲಾಟರಿಯಿಂದ ಬರುತ್ತಿರುವ ಆದಾಯವೆಷ್ಟು?*

ಆ) *1989-90 ಮತ್ತು 90-91 (ಫೆಬ್ರವರಿ 28) ರ ವರೆಗೆ ಲಾಟರಿಗಾಗಿ ಖರ್ಚು ಮಾಡುತ್ತಿರುವ ಹಣ ಹಾಗೂ ಬರುತ್ತಿರುವ ಆದಾಯದ ಪ್ರಮಾಣವೆಷ್ಟು*

ಇ) *ಮೇಲ್ಕಂಡ ಲಾಟರಿ ಯೋಜನೆಯನ್ನು ನಿಲ್ಲಿಸುವ ಯೋಜನೆ ಸರ್ಕಾರದ ಮುಂದಿದೆಯೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಕಳೆದ ಮೂರು ವರ್ಷಗಳಿಂದ ಗಳಿಸಿರುವ ಸರಾಸರಿ ನಿವ್ವಳ ಲಾಭ ವರ್ಷವೊಂದಕ್ಕೆ ರೂ. 3.22 ಕೋಟಿ

(ರೂ. ಕೋಟಿಗಳಲ್ಲಿ)

ಆ) 1989-90 ರಲ್ಲಿ ಒಟ್ಟು ಆದಾಯ	11.88
ಒಟ್ಟು ವೆಚ್ಚ	7.95
ನಿವ್ವಳ ಲಾಭ	3.91
1990-91 ರಲ್ಲಿ ಒಟ್ಟು ಆದಾಯ (ಫೆಬ್ರವರಿ 91 ರ ಅಂತ್ಯದವರೆಗೆ)	11.12
ಒಟ್ಟು ವೆಚ್ಚ	7.78
ನಿವ್ವಳ ಲಾಭ	3.34

ಇ) ಇಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಸಮುದ್ರ ತೀರದಲ್ಲಿ ಹೂಳೆತ್ತುವ ಕೆಲಸ ಹಾಗೂ ತಡೆಗೋಡೆ ನಿರ್ಮಾಣ.

992 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ಸಮುದ್ರ ತೀರದಲ್ಲಿರುವ ಹೂಳೆತ್ತುವ ಕೆಲಸ ಹಾಗೂ ತಡೆಗೋಡೆ ನಿರ್ಮಿಸುವ ರಾಜ್ಯ ಸರ್ಕಾರದ ಯೋಜನೆ ಈವರೆಗೆ ಪ್ರಾರಂಭವಾಗದೆ ಇರಲು ಕಾರಣಗಳೇನು?*

ಆ) *ಮೇಲ್ಕಂಡ ಕಾರ್ಯಗಳು ಆಗದೇ ಇರುವ ಕಾರಣ ಅಪಾರ ಸಾವು ನೋವು ಹಾಗೂ ಮೀನುಗಾರರ ದೋಣಿ ದುರಂತಗಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?*

ಇ) *ಈ ವರ್ಷದ ಮಳೆಗಾಲದ ಮೊದಲು ಮೇಲಿನ ಕಾರ್ಯಗಳನ್ನು ಸರ್ಕಾರ ಆದ್ಯತೆಯ ಮೇಲೆ ಕೈಗೊಳ್ಳುವುದೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :